**ಸಿ.ಸಿ.ನಂ. 1312/2020**

ಸಿ.ಡಬ್ಲ್ಯು 18

ಪಿ.ಡಬ್ಲ್ಯು 14

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.1312/2020**

| | | |
|---|---|---|
| ಸಾಕ್ಷಿದಾರರ ಹೆಸರು | : | **ಸುಧಾ ಅಘನಾಶಿನಿ** |
| ತಂದೆಯ ಹೆಸರು | : | ತಿಪ್ಪಾ |
| ವಯಸ್ಸು | : | 53 ವರ್ಷ |
| ಉದ್ಯೋಗ | : | **ಪೊಲೀಸ ಉಪ ನಿರೀಕ್ಷಕರು, ಕರಾವಳಿ ಕಾವಲು ಪಡೆ ಹೊನ್ನಾವರ** |
| ವಾಸ್ತವ್ಯ | : | ಹೊನ್ನಾವರ |

(ಇಂದು ದಿನಾಂಕಃ 13-08-2026 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ದಿಃ 13-08-2018 ರಿಂದ 07-08-2023 ರವರೆಗೆ ಪೊಲೀಸ್ ಉಪ ನಿರೀಕ್ಷಕರಾಗಿ ಕುಮಟಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06-12-2018 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಚಾ.ಸಾ.1 ರವರು 17-30 ಗಂಟೆಗೆ ನೀಡಿದ ಗಣಕೀಕೃತ ದೂರನ್ನು ಪಡೆದುಕೊಂಡು ಠಾಣೆಗೆ ಬಂದು ಠಾಣಾ ಗುನ್ನಾ ಸಂಖ್ಯೆ 402/2018 ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು **ದೂರನ್ನು** ನೋಡಿ

ಗುರುತಿಸಿದ್ದು, ಅದನ್ನು ಈಗಾಗಲೇ **ನಿ.ಪಿ.6 ಎಂದು** ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.21 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.21(ಎ) ಎಂದು ಗುರುತಿಸಲಾಯಿತು.

ದಿಃ 07-12-2018 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಘಟನಾ ಸ್ಥಳದಲ್ಲಿ ಹಾಜರ ಇದ್ದ ಚಾಸಾ.1 ರವರು ತೋರಿಸಿದಂತೆ ಚಾಸಾ 2 ಹಾಗೂ 3 ರವರ ಸಮಕ್ಷಮದಲ್ಲಿ 10-00 ರಿಂದ 11.00 ಗಂಟೆಯವರೆಗೆ ನಿ.ಪಿ.1 ರಂತೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸದ್ರಿ ಸಂದರ್ಭದಲ್ಲಿ ಫೋಟೊವನ್ನು ತೆಗೆದಿರುತ್ತೇವೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು **ಸ್ಥಳ ಪಂಚನಾಮೆ** ಆಗಿದ್ದು, ಅದನ್ನು ಈಗಾಗಲೇ **ನಿ.ಪಿ.1 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ1(ಡಿ) ಎಂದು** ಗುರುತಿಸಲಾಯಿತು. ಸಾಕ್ಷಿಯು ನಿಪಿ 2 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ದಿಃ 28-06-2019 ರಂದು 3 ನೇ ಆರೊಪಿತನು ಕಡ್ಲೆ ಮಂಗೊಡ್ಲಿ ಹತ್ತಿರ ಸಿಕಕವನನ್ನು ವಿಚಾರಣೆ ಮರಾಡಿ 09.45 ಗಂಟೆ ಠಾಣೆ ಕರೆದುಕೊಂಡು ದಸ್ತಗಿರಿ ಮಾಡಿರುತ್ತೆನೆ. ದಸ್ತಗಿರಿ ಸಮಯದಲ್ಲಿ ಆರೋಪಿತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸ್ವಇಚ್ಛಾ ಹೆಳಿಕೆಯಲ್ಲಿ ತಾನು ಕಳ್ಳತನ ಮಾಡಿದ ಜಾಗವನ್ನು ತೋರಿಸುವುದಾಗಿ ಹೇಳಿರುತ್ತಾನೆ. ಸದರಿ ಭಾಗವನ್ನು ನಿಪಿ.22 ಎಂದು ಗುರುತಿಸಲಾಯಿತು.

ಸಿ.ಡಬ್ಲ್ಯು 18

ಪಿ.ಡಬ್ಲ್ಯು 14

ನಿಪಿ.19 ರಂತೆ ಆರೊಪಿತರನು ನಮ್ಮನ್ನು ತಾನು ಕಳ್ಳತನ ಜಾಗವಾದ ಮಣಿಕಿ ಮೈದಾನಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸಾ.6 ಹಾಗೂ 7 ರವರ ಸಮಕ್ಷಮದಲ್ಲಿ ನಿಪಿ.7 ರಂತೆ 3.00 ರಿಂದ 04.30 ಗಂಟೆಯವರೆಗೆ ನಿಪಿ.7 ರಂತೆ ಪಂಚನಾಮೆಯನ್ನು ನಿಪಿ.8 ಮತ್ತು 9 ರಂತೆ ಭಾವಚಿತ್ರವನ್ನು ತೆಗೆದಿರುತ್ತೇನೆ. ನಿಪಿ.7 ರ ಸಾಕ್ಷಿಯ ಸಹಿಯನ್ನು ನಿಪಿ.7(ಸಿ) ಎಂದು ಗುರುತಿಸಾಲಂತು. ನಿಪಿ.8 ಹಾಗೂ 9 ರಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ನೊಡಿ ಗುರುತಿಸಲಾಯಿತು. ನಂತರ ತನಿಖೆಯನ್ನು ಪೂರ್ಣಗೊಳಿಸಿ 3 ನೇ ಆರೊಪಿತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 02-07-2019 ರಂದು 1 ಮತ್ತು 2 ಆರೋಪಿತರನ್ನು ನ್ಯಾಯಾಲಯಕ್ಕೆ ಪೊಲೀಸ ಅಭಿರಕ್ಷೆಗೆ ತೆಗೆದುಕೊಂಡು ನಂತರ ಠಾಣೆಗೆ ಕರೆದುಕೊಂಡು ದಸ್ತಗಿರಿ ನಿಯಮವನ್ನು ಪಾಲಿಸಿ ಆರೋಪಿತರ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ಸದರಿ ಸ್ವಇಚ್ಛಾ ಹೇಳಿಕೆಯಲ್ಲಿ ಆರೊಪಿತರು ನನ್ನ ಜೊತೆ ತಾವು ಕಳ್ಳತನ ಜಾಗವನ್ನು ತೋರಿಸುವುದಾಗಿ ಹೇಳಿರುತ್ತಾನೆ. ಸದರಿ ಭಾಗವನ್ನು ನಿಪಿ.23 ಹಾಗೂ ನಿಪಿ.24 ಎಂದು ಗುರುತಿಸಲಾಯಿತು.

ನಿಪಿ.20 ಹಾಗೂ 21 ರಂತೆ ಆರೊಪಿತರನು ನಮ್ಮನ್ನು ತಾನು ಕಳ್ಳತನ ಜಾಗವಾದ ಹೊಸ ಬಸ್ ನಿಲ್ದಾಣದ ಅನುಪಮಾ ಹೊಟೆಲ್ ಹತ್ತಿರ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸಾ.8 ಮತ್ತು 9 ರವರ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿದ್ದು ಸದರಿ ಪಂಚನಾಮೆಯ ನಕಲು ಪ್ರತಿಯಾತರುವುದರಿಂದ ಸದರಿ ದಾಹಲಾತಿಯನ್ನು ನಿಷಾನೆ

ಮಾಡಲು ಅರೊಪಿ ಪರ ವಕೀಲರು ತಕರಾರು ತೆಗೆದಿರುತ್ತಾರೆ. . ನಿಪಿ.11 ಹಾಗೂ 12 ರಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ನೊಡಿ ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೊಪಿತರನ್ನು ನೊಡಿ ಗುರುತಿಸಿರುತ್ತಾರೆ.

ಚಾಸಾ.1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ.10 ರಿಂದ 15 ರವರ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ನು ಪಡೆದುಕೊಂಡಿರುತ್ತೇನೆ. ಚಾಸಾ.14 ರವರು ಈ ಪ್ರಕರಣದ ಭಾವಚಿತ್ರಕ್ಕೆ ಸಂಬಂಧಿಸಿದಂತೆ 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಸದದಿರಿ ದಾಖಲಾತಿಯನ್ನು ನಿಪಿ.25 ಎಂದು ಸಾಕಕ್ಷಿಯ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು.

ದಿಃ 16 ರವರಿಗೆ ಕೆಎ-47-ಇ-2604 ರ ಬಿಎಕ್ಸಟ್ರಾಕಟ ಪಡೆದುಕೊಂಡು ಕಡತಕ್ಕೆ ಅಳಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಯನ್ನು ನಿಪಿ.26 ಎಂದು ಗುರುತಿಸಲಾಸಿಯಿತು. ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ನಂತರ ಮಾನನ್ಯ ನಾಯಾಲಯದ ಆದೇಶದಂತೆ 16-07-2019 ರಂದು ಪಂಚರ ಸಮಕ್ಷಮದಲ್ಲ ವಾಹನವನುನ ಅದರ ವಾರಸುದಾರರಿಗೆ ಬಿಡುಗಡೆ ವಾುಡಿರುತ್ತೆನೆ, ಸದರ ಸಂದರ್ಭದಲ್ಲಿ 11.00 ರಿಂದ 12.00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತೆನೆ. ಸದರಿ ಸಂದರ್ಭದಲ್ಲಿ ಭಾವಚಿತ್ರವನ್ನು ತೆಗೆದಿರುತ್ತೇನೆ. ಪಂಚನಾಮೆಯನ್ನು ನಿಪಿ.27 ಎಂದು ಸಾಕ್ಷಿ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು. ಭಾವಚಿತ್ರವನ್ನು ನಿಪಿ.28

ರಿಂದ 31 ಎಂದು ಗುರುತಿಸಲಾಯಿತು. ನಂತರ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಲಭ್ಯವಿದ್ದರಿಂದ ಆರೋಪಿತರ ವಿರುದ್ಧ ದೋ. ಪಟ್ಟಿಯನ್ನು ಸಲ್ಲಿಸಿರುತ್ತೇನೆ..

**ಪಾಟೀ ಸವಾಲು –ಆರೋಪಿ ಪರ ಶ್ರೀ. ಪಿ.ಎಸ್.ಎನ್.ವಕೀಲರಿಂದ**

ಈ ಘಟನೆ ನಂತರ 15 ದಿನಗಳ ನಂತರದಲ್ಲಿ ನನ್ನ ಪ್ರಕಾರ ಈ ಘಟನೆ ನಡೆದಿದೆ ಎನ್ನಲಾದ 15 ದಿನಗಳ ನಂತರ ನಿಪಿ.6 ನ್ನು ನೀಡಿದ್ದಾರೆ ಎಂದರೆ ಸರಿ. ನಿಪಿ.6 ನ್ನು ನೀಡಲು ವಿಳಂಬವಾದ ಕಾರಣವನ್ನು ಚಾಸಾ.1 ರವರು ತಿಳಿಸಿರುತ್ತಾರೆ. ನಾನು ಈ ಪ್ರಕರಣದ ಆರಂಭದಲ್ಲಿ ಸುಳ್ಳು ದೂರನ್ನು ಪಡೆದುಕೊಂಡು ಸುಳ್ಳು ಪ್ರ.ವ.ವರದಿಯನ್ನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಸುಳ್ಳು ಪ್ರ.ವ.ವರದಿಗೆ ಪೂರಕವಾಗಿ ನಿಪಿ.1 ಹಾಗೂ ಫೋಟೋಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಅವರು ಯಾವುದೇ ಸ್ಥಳವನುನ ತೋರೀಸಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೆಳಿಕೆ ಹಾಗೂ ಮರು ಹೇಳಿಕೆಗಳನ್ನು ನಾನು ಠಾಣೆಯಲ್ಲಿ ಕುಳಿತುಕೊಂಡು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಎಲ್ಲ ದಾಖಲಾತಿ ಹಾಗು ಫೋಟೋಗಳನ್ನು ಠಾಣೆಯಲ್ಲಿ ಕುಳಿತುಕೊಂಡು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನುದಾಖಲಿಸಿದ ಸುಳ್ಳು ಪ್ರಕಣಕ್ಕೆ ಪೂರಕವಾಗಿ ಚಾಸಾ.17 ರವರು ಸುಳ್ಳು ಪಂಚನಾಮೆ ಹಾಗೂ ಫೋಟೋಗಳನುನ ನನ್ನ ಪ್ರಕರಣಕ್ಕೆ ಅನುಕೂಲವಾಗುವಂತೆ ನೀಡಿದ್ದಾರೆ ಎಂದರೆ ಸರಿಯಲ್ಲ. ಆರೊಪಿತರ ವಿರುದ್ಧ ಯಾವುದೇ ಸಾಕ್ಷ್ಯಾಧ್ಯಾರಗಳು ಲಭ್ಯವಿಲ್ಲದೇ ಇದ್ದರೂ ಕೂಡ ನಾನುಅ ವರ ವಿರುದ್ಧ

**ಸಿ.ಸಿ.ನಂ. 1312/2020**

ಸಿ.ಡಬ್ಲ್ಯು 18

ಪಿ.ಡಬ್ಲ್ಯು 14

ಸುಳ್ಳು ದೋ.ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ದೋ.ಪಟ್ಟಿಯಲ್ಲಿ ನಮೂದಿಸಿದ ಅಪರಾಧವನ್ನು ಆರೋಪಿತರರು ಮಾಡಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಮು.ಮಾಲಿಗೂ ಆರೊಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಪ್ರ.ದ.ನ್ಯಾ.ದಂ. ಕುಮಟಾ